

# ಚಪ್ಪಲಿಗೂ ಕಲಂಕಾರಿ, ಇಕತ್ ಶೈಲಿ

ಚಪ್ಪಲಿಗಳು ಈಗ ಕೇವಲ ಪಾದ ರಕ್ಷಕಗಳಾಗಿ ಉಳಿದಿಲ್ಲ. ಧರಿಸಿದ ವ್ಯಕ್ತಿಯ ಪ್ರತಿಷ್ಠೆಯ ಸಂಕೇತವೂ ಆಗುತ್ತಿವೆ. ಕುಸುರಿ, ಕಸೂತಿ, ಮಣಿ–ಹರಳು ಪೋಣಿಸಿದ ಚಪ್ಪಲಿಗಳು ಫ್ಯಾಷನ್ ಪ್ರಿಯರ ನೆಚ್ಚಿನ ಆಯ್ಕೆಗಳಾಗಿವೆ. ಈ ಸಾಲಿಗೆ ಈಗಿನ ಸೇರ್ಪಡೆ ಕಲಂಕಾರಿ, ಇಕತ್, ಬ್ಲಾಕ್ ಪ್ರಿಂಟ್, ರೇಷ್ಮೆಯ ಬಟ್ಟೆಗಳಿಂದ ಅಲಂಕೃತ ಚಪ್ಪಲಿಗಳು.

■ ರೋಹಿಣಿ ಮುಂಡಾಜೆ



ಕಲಂಕಾರಿ ಚಪ್ಪಲಿಗಳು ಮಾರುಕಟ್ಟೆ ಪ್ರವೇಶಿಸಿ ಎರಡು ವರ್ಷಗಳೇ ಕಳೆದಿವೆ. ಇಕತ್, ಬ್ಲಾಕ್ ಪ್ರಿಂಟ್ ಮತ್ತು ರೇಷ್ಮೆಯ ವಿನ್ಯಾಸ ಈಗಿನ ಟ್ರೆಂಡ್. ಅಗ್ಗದ ಅಥವಾ ಬ್ರ್ಯಾಂಡೆಡ್ ಪಾದರಕ್ಷೆ ಖರೀದಿಸಿ ಅದನ್ನು ಕಸ್ಟಮೈಸ್ಡ್ ವಿನ್ಯಾಸಕ್ಕೆ ಮಾರ್ಪಡಿಸುವುದು ಈಗ ಸಾಮಾನ್ಯ. ಅಡಿಯಿಂದ ಮುಡಿಯವರೆಗೆ ಮ್ಯಾಚಿಂಗ್ ಮಾಡುವ ಉಮೇದು ಹೆಚ್ಚುತ್ತಿರುವುದು ವಸ್ತ್ರ ವಿನ್ಯಾಸಕರಲ್ಲಿ ಹೊಸ ಚಿಂತನೆಗಳನ್ನು ಹುಟ್ಟುಹಾಕುತ್ತಿವೆ. ಇದರ ಪರಿಣಾಮವಾಗಿ, ಈ ಬಗೆಯ ಚಪ್ಪಲಿಗಳು ಟ್ರೆಂಡ್ ಸೃಷ್ಟಿಸುತ್ತಿವೆ. ಇಕತ್ ವಿನ್ಯಾಸದ ಚಪ್ಪಟೆ ಶೂಗಳು ಆನ್‌ಲೈನ್‌ನಿಂದ ಹಿಡಿದು ರಸ್ತೆಬದಿಯ ಮಳಿಗೆಗಳಲ್ಲೂ ಯಥೇಚ್ಛವಾಗಿ ಸಿಗುತ್ತವೆ.

ಉದಾಹರಣೆಗೆ ಕಲಂಕಾರಿ ಅಥವಾ ಬ್ಲಾಕ್ ಪ್ರಿಂಟ್‌ನ ಲಾಂಗ್ ಕುರ್ತಾ, ಮಿನಿ ಸ್ಕರ್ಟ್, ಮೇಲುಡುಗೆ, ಜಾಕೆಟ್ ಧರಿಸಿದ್ದೀರಿ ಎಂದುಕೊಳ್ಳಿ. ಹತ್ತಿಯ ಅಥವಾ ಚರ್ಮದ ಪಾದರಕ್ಷೆ ಧರಿಸಿದರೆ ನಿಮ್ಮ ಒಟ್ಟಾರೆ ನೋಟಕ್ಕೆ ಹೊಸ ಚೌಕಟ್ಟು ಸಿಗುತ್ತದೆ. ಮುಕ್ಕಾಲು ಪ್ಯಾಂಟ್, ಪಲಾಜೊ/ ಬೆಲ್ ಬಾಟಮ್‌ನಂತಹ ದೊಗಳೆ ಪ್ಯಾಂಟ್‌ಗಳಿಗೆ, ಮೈಗಂಟಿಕೊಳ್ಳುವ ಉಡುಗೆಗಳಿಗೂ ಈ ದೇಸಿ ಸ್ಪರ್ಶದ ಚಪ್ಪಲಿ ಒಪ್ಪುತ್ತದೆ.

ಹೆಸರಾಂತ ವಸ್ತ್ರ ವಿನ್ಯಾಸಕರಾದ, ಬೆಂಗಳೂರಿನ 'ಸಖಿ ಫ್ಯಾಷನ್ಸ್'ನ ಚಂದ್ರಾ ಮತ್ತು ನೀತಾ ರಾಜೇಂದ್ರ ಕಲಂಕಾರಿ ಉಡುಪುಗಳ ಹೊಸ ಸಂಗ್ರಹದ ಪ್ರದರ್ಶನವನ್ನೊಮ್ಮೆ ಏರ್ಪಡಿಸಿದ್ದರು. ಕಲಂಕಾರಿ ವಿನ್ಯಾಸದ ಸೀರೆ, ಕುರ್ತಾಗಳನ್ನು ಖರೀದಿಸಿದ ಮಹಿಳೆಯರು ಕಲಂಕಾರಿ ಒಡವೆಗಳು ಹಾಗೂ ಚಪ್ಪಲಿಗಳಿಗೆ ಮನಸೋತಿದ್ದರು.

ಆನ್‌ಲೈನ್ ಮಾರುಕಟ್ಟೆಗಳಲ್ಲೇ ಗಮನಿಸಿ. ಇಕತ್, ಕಲಂಕಾರಿ ಮತ್ತು ರೇಷ್ಮೆಯ ಬಟ್ಟೆಯಿಂದ ವಿನ್ಯಾಸ ಮಾಡಿದ ಚಪ್ಪಲಿಗಳ ಆಗರವೇ ಸಿಗುತ್ತದೆ. ₹350 ರಿಂದ 800ರೊಳಗಿನ ಬೆಲೆಯಲ್ಲಿ ಸಿಗುವ ಕಾರಣ ಮ್ಯಾಚಿಂಗ್ ಮೇನಿಯಾಕ್ಕೆ ಫಿದಾ ಆದವರು ಕೊಳ್ಳಲು ಅಡ್ಡಿಯೇನಿಲ್ಲ.